# ದೂರಶಿಕ್ಷಣ ನಿರ್ದೇಶನಾಲಯ

## ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

ದೂರವಾಣಿ ೦೮೩೯೪-೨೮೦೨೦೦

ಇ-ಮೇಲ್ : dde.kuh@gmail.com


---

ಸಂಖ್ಯೆ:ಕವಿಹಂ:ದೂಶಿನಿ:ಸಂತ.ಗೃ:2018–19/2018–19 ದಿನಾಂಕ. 28.03.2019

### ಸೂಚನೆ

2018–19ನೇ ಶೈಕ್ಷಣಿಕ ಸಾಲಿನ **ಎಂ.ಎ. ಚರಿತ್ರೆ ಅಂತಿಮ** ವರ್ಷದ ವಿದ್ಯಾರ್ಥಿಗಳಿಗೆ ಈ ಮೂಲಕ ಸೂಚಿಸುವುದೇನೆಂದರೆ, **ಕೋರ್ಸ್‌ನ ಪ್ರತಿ ಪತ್ರಿಕೆಯ ಎರಡು ಸ್ವಲಿಖಿತ ಎ4 ಅಳತೆಯ ಕನಿಷ್ಠ 10 ಪುಟಗಳ ಗೃಹಲೇಖನಗಳನ್ನು** ಪ್ರತಿಯೊಬ್ಬ ವಿದ್ಯಾರ್ಥಿಯು ಕಡ್ಡಾಯವಾಗಿ ಸಿದ್ಧಪಡಿಸಿ **ದಿನಾಂಕ 30.05.2019ರ** ಒಳಗೆ ಸಲ್ಲಿಸಬೇಕು. ವಿವಿಧ ಅಧ್ಯಯನ ಮತ್ತು ವಿಸ್ತರಣ ಕೇಂದ್ರಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಆಯಾ ಅಧ್ಯಯನ ಮತ್ತು ವಿಸ್ತರಣ ಕೇಂದ್ರಗಳ ಮುಖ್ಯಸ್ಥರ ಮೂಲಕ ಸಲ್ಲಿಸುವುದು. ರೂ. 300.00ಗಳ **ದಂಡಸಹಿತ ಗೃಹಲೇಖನವನ್ನು ಸಲ್ಲಿಸಲು 15.06.2019**ರವರೆಗೆ ಕಾಲಾವಕಾಶ ಇರುತ್ತದೆ. ತಡವಾಗಿ ಸಲ್ಲಿಸಿದ ಗೃಹಲೇಖನಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. ವಿದ್ಯಾರ್ಥಿಗಳು ಸಕಾಲದಲ್ಲಿ ಗೃಹಲೇಖನಗಳನ್ನು ಸಲ್ಲಿಸದಿದ್ದಲ್ಲಿ ಈ ಸಂಬಂಧದ ಆಂತರಿಕ ಅಂಕಗಳನ್ನು ನೀಡದೆ ಫಲಿತಾಂಶ ಪ್ರಕಟಿಸಲಾಗುವುದು.

ಈ ಕೆಳಗಿನ ಐದು ಪತ್ರಿಕೆಗಳಲ್ಲಿ ಪ್ರತಿಯೊಂದರಲ್ಲೂ ಐದು ವಿಷಯಗಳನ್ನು ಕೊಡಲಾಗಿದೆ. ಇವುಗಳಲ್ಲಿ ಪ್ರತಿ ಪತ್ರಿಕೆಯಲ್ಲಿಯೂ ಎರಡು ವಿಷಯ ಕುರಿತು ಕಡ್ಡಾಯವಾಗಿ ಪ್ರತಿಯೊಂದು ವಿಷಯಕ್ಕೆ ಕನಿಷ್ಠ 10 ಪುಟಗಳ ಗೃಹಲೇಖನ ಬರೆಯಬೇಕು. ಪ್ರತಿಯೊಂದು ಪತ್ರಿಕೆಗೂ 10 ಅಂಕಗಳು ಇರುತ್ತವೆ. ಐದು ಪತ್ರಿಕೆಗಳಿಗೆ ಒಟ್ಟು 50 ಅಂಕಗಳಿರುತ್ತವೆ.

### ಗೃಹಲೇಖನ ಕಳುಹಿಸುವ ವಿಳಾಸ

**ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583 276.**

**ಗೃಹಲೇಖನದ ವಿಷಯಗಳು**

**ಕೋರ್ಸ್ (ಪತ್ರಿಕೆ) – 6 : ಚರಿತ್ರೆ ಸಂಶೋಧನಾ ವಿಧಾನಗಳು**

1. ಚರಿತ್ರೆಯ ಬರವಣಿಗೆಯಲ್ಲಿ ಸಹಾಯಕ ಶಿಸ್ತುಗಳ ಪಾತ್ರ ಕುರಿತಂತೆ ವಿವರಿಸಿ.
2. ರಚನಾವಾದ–ರಚನೋತ್ತರವಾದ–ಆಧುನಿಕೋತ್ತರವಾದಗಳ ಅಂತರ್ ಸಂಬಂಧಗಳು ನಿರ್ವಾತ ವಾತಾವರಣದಲ್ಲಿಯೇ ಇದೆ ಎಂಬುದನ್ನು ನಿಮ್ಮ ಮಾತಿನಲ್ಲಿ ಚರ್ಚಿಸಿ.
3. ಆಕರ ಸಂಗ್ರಹ ಮತ್ತು ಕ್ಷೇತ್ರಕಾರ್ಯ ಸಂಶೋಧನೆಯಲ್ಲಿ ನಿರ್ವಹಿಸುವ ಪಾತ್ರವೇನು?
4. ಚರಿತ್ರೆ ಬರವಣಿಗೆಯ ವಿಧಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

**ಕೋರ್ಸ್ (ಪತ್ರಿಕೆ) – 7 : ಪಾಶ್ಚಿಮಾತ್ಯ ನಾಗರಿಕತೆ ಆಯ್ದ ವಿಷಯಗಳು**

1. ಅಮೇರಿಕಾದ ವಸಾಹತುಗಳು ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟವನ್ನು ವಿವರಿಸಿ.
2. ಅಮೇರಿಕಾದಲ್ಲಿ ಗುಲಾಮಗಿರಿಯ ಹುಟ್ಟು ಮತ್ತು ಸ್ವರೂಪವನ್ನು ಕುರಿತು ಪ್ರಬಂಧ ಬರೆಯಿರಿ.
3. ಕ್ಯೂಬಾದಲ್ಲಿ ಫೀಡಲ್ ಕ್ಯಾಸ್ಟ್ರೋ ನೇತೃತ್ವದಲ್ಲಿ ನಡೆದ ಕ್ರಾಂತಿಕಾರಿ ಹೋರಾಟದ ವಿವಿಧ ಹಂತಗಳನ್ನು ಚರ್ಚಿಸಿ.
4. ಜಾಗತೀಕರಣದ ಹುಟ್ಟು ಮತ್ತು ಬೆಳವಣಿಗೆಗೆ ಕಾರಣವಾದ ಅಂಶಗಳನ್ನು ಚರ್ಚಿಸಿ.

**ಕೋರ್ಸ್ (ಪತ್ರಿಕೆ) – 8 : ಏಷ್ಯ : ವಸಾಹತುಶಾಹಿ ಮತ್ತು ರಾಷ್ಟ್ರೀಯತೆ**

1. ಮುಸ್ತಾಫ ಕೆಮಾಲ್ ಪಾಶಾನ ಸುಧಾರಣೆಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸಿ.
2. 1911ರ ಚೀನಾದ ಕ್ರಾಂತಿಯ ಕುರಿತು ವಿಮರ್ಶಾತ್ಮಕ ಪ್ರಬಂಧ ಬರೆಯಿರಿ.
3. ಇಂಡೋನೇಷ್ಯಾದಲ್ಲಿ ರಾಷ್ಟ್ರೀಯವಾದದ ಉದಯಕ್ಕೆ ಕಾರಣವಾದ ಅಂಶಗಳ ಕುರಿತು ಬರೆಯಿರಿ.
4. ಭಾರತದ ವಿಭಜನೆಯ ಹಿನ್ನೆಲೆಯನ್ನು ವರ್ಣಿಸಿರಿ. ಕಾಶ್ಮೀರ ಸಮಸ್ಯೆಯ ಬೇರುಗಳನ್ನು ಇಲ್ಲಿ ಕಾಣಬಹುದೇ?

**ಕೋರ್ಸ್ (ಪತ್ರಿಕೆ) – 9 : ಆಧುನಿಕ ಭಾರತ ಆಯ್ದ ವಿಷಯಗಳು**

1. ಭಾರತದಲ್ಲಿ ವಸಾಹತು ಪ್ರಭುತ್ವದ ವಿವಿಧ ಹಂತಗಳನ್ನು ವಿಶ್ಲೇಷಿಸಿ.
2. ಹತ್ತೊಂಬತ್ತನೇ ಶತಮಾನದ ಭಾರತದಲ್ಲಿ ಆದ ಶೈಕ್ಷಣಿಕ ಪ್ರಗತಿಯನ್ನು ಗುರುತಿಸಿ.
3. ಕೋಮುವಾದದ ಉಗಮ ಮತ್ತು ವಿಸ್ತರಣೆಯ ವಿವಿಧ ಮಜಲುಗಳನ್ನು ಚರ್ಚಿಸಿ.
4. ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಯೋಜಿತ ಅಭಿವೃದ್ಧಿ ತಂತ್ರವನ್ನು ಭಾರತವು ಅಳವಡಿಸಿಕೊಳ್ಳುವುದು ಹೇಗೆ ಸಾಧ್ಯವಾಯಿತು? ವಿವರಿಸಿ.

**ಕೋರ್ಸ್ (ಪತ್ರಿಕೆ) – 10 : ವಿಜಯನಗರ**

1. ಭಾರತೀಯ ಚರಿತ್ರೆಯಲ್ಲಿ ವಿಜಯನಗರದ ಆಡಳಿತದ ಕೊಡುಗೆಗಳೇನು?
2. ವಿಜಯನಗರ ಪ್ರಭುತ್ವ ರಚನೆಯ ಕುರಿತ ವಿಭಿನ್ನ ಸಿದ್ಧಾಂತಗಳನ್ನು ಪರಿಶೀಲಿಸಿ.
3. ವಿಜಯನಗರ ಕಾಲದ ಗ್ರಾಮ್ಯ ದೇವತಾರಾಧನೆ ಹಾಗೂ ಅದರ ಪ್ರಭಾವವನ್ನು ಪರಿಶೀಲಿಸಿರಿ.
4. ನಾಯಕರುಗಳ ಕಾಲದ ಪ್ರಮುಖ ಬೆಳವಣಿಗೆಗಳ ಕುರಿತು ಚರ್ಚಿಸಿ.

ನಿರ್ದೇಶಕರು

E:dde:contact18-19/assrments/7